

بسم اللہِ الرّحمٰن الرّحیم

# ಹಝ್ರತ್ ಉಮರ್(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **30–07–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಕಾಲದ ಯುದ್ಧಗಳ ಬಗ್ಗೆ ಪ್ರಸ್ತಾಪ ನಡೆಯುತ್ತಿತ್ತು. ಮದಾಇನಿನ ಮೇಲೆ ವಿಜಯದ ಬಗ್ಗೆ ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆಯುತ್ತಾರೆ: ಕಂದಕವನ್ನು ಅಗೆಯುವಾಗ ಒಂದು ಬಂಡೆಕಲ್ಲನ್ನು ತುಂಡರಿಸಲು ಆಗುತ್ತಿರಲಿಲ್ಲ. ಅದಲ್ಲದೆ ಸಹಾಬರು ಮೂರು ದಿನದ ಹಸಿವಿನಿಂದ ಸುಸ್ತಾಗಿದ್ದರು. ಕೊನೆಗೆ ಯಾವುದೇ ನಿರ್ವಾಹವಿಲ್ಲದೆ ಅವರು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು. ಆ ವೇಳೆ ಹಝ್ರತ್ ಪೈಗಂಬರ್(ಸ) ಕೂಡ ಹಸಿವೆಯ ಕಾರಣದಿಂದ ಹೊಟ್ಟೆಯಲ್ಲಿ ಕಲ್ಲನ್ನು ಕಟ್ಟಿದ್ದರು. ಹೀಗಿದ್ದರೂ ಹಝ್ರತ್ ಪೈಗಂಬರ್(ಸ) ಬೇಗನೇ ಕಂದಕದ ಸಮೀಪಕ್ಕೆ ಹೋದರು. ಒಂದು ಪಿಕ್ಕಾಸು ಹಿಡಿದುಕೊಂಡು ಅಲ್ಲಾಹನ ನಾಮದಲ್ಲಿ ಆ ಬಂಡೆಕಲ್ಲಿನ ಮೇಲೆ ಹೊಡೆದರು. ಪಿಕ್ಕಾಸು ತಗುಲಿದಾಗ ಕಲ್ಲಿನಿಂದ ಒಂದು ಬೆಂಕಿಯ ಕಿಡಿ ಹಾರಿತು. ಆಗ ಹಝ್ರತ್ ಪೈಗಂಬರ್(ಸ) ಜೋರಾಗಿ **ಅಲ್ಲಾಹು ಅಕ್ಬರ್** ಎಂದು ಉಚ್ಚರಿಸುತ್ತಾ ಹೀಗೆ ಹೇಳಿದರು: "ನನಗೆ ಸಿರಿಯ ದೇಶದ ಕೀಲಿಗೈಯನ್ನು ನೀಡಲಾಗಿದೆ ಮತ್ತು ಸಿರಿಯದ ಕೆಂಪು ಅರಮನೆಗಳು ನನ್ನ ಕಣ್ಣ ಮುಂದೆ ಕಾಣುತ್ತಿವೆ." ಅನಂತರ ಎರಡನೇ ಬಾರಿ ಹೊಡೆದರು ಮತ್ತು ಹೀಗೆ ಹೇಳಿದರು: ಪರ್ಶಿಯದ ಕೀಲಿಗೈಗಳು ನನಗೆ ನೀಡಲಾಗಿವೆ ಮತ್ತು ನನಗೆ ಮದಾಇನಿನ ಬಿಳಿ ಅರಮನೆಗಳು ಕಾಣುತ್ತಿವೆ. ಅನಂತರ ಹಝ್ರತ್ ಪೈಗಂಬರ್(ಸ) ಮೂರನೇ ಬಾರಿ ಹೊಡೆದರು ಮತ್ತು ಹೇಳಿದರು: ಈಗ ನನಗೆ ಯಮನಿನ ಕೀಲಿಗೈಗಳು ನೀಡಲಾಗಿವೆ. ಸುನ್‌ಆದ ಬಾಗಿಲುಗಳನ್ನು ನನಗೆ ಈಗ ತೋರಿಸಲಾಗುತ್ತಿವೆ.

ಹಝ್ರತ್ ಪೈಗಂಬರ್(ಸ) ನೋಡಿದ ಈ ದೃಶ್ಯ ಒಂದು ದಿವ್ಯದರ್ಶನವಾಗಿತ್ತು. ಹೀಗೆ ಈ ಕಷ್ಟತೆಯ ಸಮಯದಲ್ಲಿ ಅಲ್ಲಾಹನು ಮುಸ್ಲಿಮರಿಗೆ ಮುಂದಿನ ವಿಜಯಗಳ ಮತ್ತು ನೆಮ್ಮದಿಗಳ ದೃಶ್ಯವನ್ನು ತೋರಿಸಿಕೊಟ್ಟು ಸಹಾಬರೊಳಗೆ ಪ್ರತೀಕ್ಷೆ ಮತ್ತು ಸಂತೋಷದ ಸ್ಫೂರ್ತಿ ಉಂಟುಮಾಡಿದನು. ಮದಾಇನಿನ ಮೇಲೆ ವಿಜಯದ ಈ ವಾಗ್ದಾನ ಹಝ್ರತ್ ಉಮರರ ಖಿಲಾಫತ್ ಕಾಲದಲ್ಲಿ ಹಝ್ರತ್ ಸಅದ್(ರ)ರ ಕೈಗಳಲ್ಲಿ ಈಡೇರಿತು. ಖಾದಿಸಿಯದ ಮೇಲೆ ಜಯಗಳಿಸಿದ ನಂತರ ಈಗಿನ ಇರಾಕಿನ ಪ್ರಾಚೀನ ಪಟ್ಟಣವಾದ ಬಾಬುಲ್ ಮೇಲೆ ವಿಜಯ ಸಾಧಿಸಲಾಯಿತು. ಅನಂತರ ಕೂಸಾ ಎಂಬ ಹೆಸರಿನ ಚಾರಿತ್ರಿಕ ಪಟ್ಟಣಕ್ಕೆ ತಲುಪಿದರು. ಇದು ಬಾಬುಲಿನ ಆಸುಪಾಸಿನ ಪ್ರದೇಶವಾಗಿದೆ. ಕೂಸಾ ಎಂಬುದು ಹಝ್ರತ್ ಇಬ್ರಾಹೀಮರನ್ನು ನಮ್ರೂದ್ ಬಂಧಿಸಿದ ಸ್ಥಳವಾಗಿತ್ತು. ಸೆರೆಮನೆಯ ಜಾಗ ಆ ವೇಳೆ ಸುರಕ್ಷಿತವಾಗಿತ್ತು. ಹಝ್ರತ್ ಸಅದ್(ರ) ಅಲ್ಲಿಗೆ ತಲುಪಿ ಸೆರೆಮನೆಯನ್ನು ನೋಡಿದಾಗ ಪವಿತ್ರ ಖುರ್‌ಆನಿನ ಈ ವಚನವನ್ನು ಓದಿದರು. **ತಿಲ್‌ಕಲ್ ಅಯ್ಯಾಮು ನುದಾವಿಲುಹಾ ಬೈನನ್ನಾಸ್**. ಎಂದರೆ "ಇಂತಹ ವಿಜಯದ ದಿನಗಳನ್ನು ನಾವು ಜನರೆಡೆಯಲ್ಲಿ ಬದಲಾಯಿಸುತ್ತಲಿರುತ್ತೇವೆ." ಅನಂತರ ಕೂಸದಿಂದ ದಾಟುತ್ತಾ ಇಸ್ಲಾಮಿನ ಸೈನ್ಯ ಬಹರ್‌ಸೇರ್ ತಲುಪಿತು. ಅಲ್ಲಿ ಇರಾನಿಯರು ಅರಸನ ಶಿಕಾರಿ ಸಿಂಹವನ್ನು ಸೈನ್ಯದ ಮೇಲೆ ಬಿಟ್ಟರು. ಅದು ಗರ್ಜಿಸುತ್ತಾ ಇಸ್ಲಾಮಿಕ ಸೈನ್ಯಗಳ ಮೇಲೆ ಹಲ್ಲೆ ನಡೆಸಲು ಬಂತು. ಹಝ್ರತ್ ಸಅದ್‌ರ ಸಹೋದರ ಹಾಶಿಂ ಬಿನ್ ಅಬೀ ವಖಾಸ್ ಸಿಂಹದ ಮೇಲೆ ಖಡ್ಗದಿಂದ ಹಲ್ಲೆ ನಡೆಸಿದರು. ಸಿಂಹ ಅಲ್ಲೇ ಸತ್ತುಹೋಯಿತು.

ಕಿಸ್ರಾ ರಾಜನ ರಾಜಧಾನಿ ಮದಾಇನ್ ಬಗ್ದಾದಿನ ದಕ್ಷಿಣದ ಕಡೆ ಸ್ವಲ್ಪ ದೂರದಲ್ಲಿ ದಜ್‌ಲಾ ನದಿಯ ದಡದಲ್ಲಿ ಇತ್ತು. ಮುಸ್ಲಿಮ್ ಸೈನ್ಯಕ್ಕೆ ನದಿಯನ್ನು ದಾಟಲು ಯಾವುದೇ ಮಾರ್ಗ ತೋಚುತ್ತಿರಲಿಲ್ಲ. ಇಂತದ್ದರಲ್ಲಿ ಮುಸ್ಲಿಮರ ಕುದುರೆಗಳು ನೀರಿಗೆ ಪ್ರವೇಶಿಸುತ್ತಿರುವುದಾಗಿ ಒಂದು ರಾತ್ರಿ ಹಝ್ರತ್ ಸಅದ್(ರ) ಕನಸು ಕಂಡರು. "ಮುಸ್ಲಿಮರೇ ಬನ್ನಿರಿ, ಈ ನದಿಯನ್ನು ಈಜಿ ದಾಟುವ" ಎಂದು ಹಝ್ರತ್ ಸಅದ್(ರ) ಹೇಳುತ್ತಾ ತನ್ನ ಕುದುರೆಯನ್ನು ನದಿಗೆ ಇಳಿಸಿದರು. ಅವರನ್ನು ಅನುಸರಿಸುತ್ತಾ ಸೈನ್ಯದ ಇತರ ಸಿಪಾಯಿಗಳು ಸಹ ತಮ್ಮ ಕುದುರೆಗಳನ್ನು ನದಿಗೆ ಧುಮುಕಿಸಿದರು. ಎದುರುಪಕ್ಷದ ಸೈನ್ಯವು ಈ ಆಶ್ಚರ್ಯಕರ ದೃಶ್ಯವನ್ನು ಕಂಡು ಭಯದಿಂದ ಕಿರುಚಿದರು ಮತ್ತು "ದೆವ್ವ ಬಂತು ದೆವ್ವ ಬಂತು" ಎಂದು ಹೇಳುತ್ತಾ ಓಡಲು ಶುರುಮಾಡಿದರು. ಮುಸ್ಲಿಮರು ಮುಂದಕ್ಕೆ ಧಾವಿಸಿ ಪಟ್ಟಣ ಮತ್ತು ಅರಸನ ಅರಮನೆಗಳನ್ನು ವಶಪಡಿಸಿದರು. ಈ ರೀತಿಯಲ್ಲಿ ಅಹ್‌ಝಾಬ್ ಯುದ್ಧದ ವೇಳೆ ಹಝ್ರತ್ ಪೈಗಂಬರ್(ಸ) ಹೇಳಿದ ಭವಿಷ್ಯವಾಣಿ ಈಡೇರಿತು. ಅರಮನೆಯ ಖಜಾನೆ ಮತ್ತು ಅಮೂಲ್ಯ ವಸ್ತುಗಳನ್ನು ಒಟ್ಟುಗೂಡಿಸಲು ಹಝ್ರತ್ ಸಅದ್(ರ) ಆಜ್ಞಾಪಿಸಿದರು. ಮುಸ್ಲಿಮ್ ಸಿಪಾಯಿಗಳು ಅತ್ಯಂತ ಪ್ರಾಮಾಣಿಕತೆಯಿಂದ ಎಲ್ಲ

ಸಾಮಾನುಗಳನ್ನು ಒಟ್ಟುಗೂಡಿಸಿದರು. ಯುದ್ಧ ಸಂಪತ್ತನ್ನು ನಿಯಮಾನುಸಾರ ವಿತರಣೆ ಮಾಡಿ ಐದನೇ ಒಂದು ಭಾಗ ಖಿಲಾಫತಿನ ಸನ್ನಿಧಿಗೆ ಕಳುಹಿಸಲಾಯಿತು.

ಹಿಜರೀ 16ರಲ್ಲಿ ಜಲೂಲ ಯುದ್ಧ ನಡೆಯಿತು. ಮದಾಇನಿನಲ್ಲಿ ಸೋಲು ಅನುಭವಿಸಿದ ನಂತರ ಇರಾನಿಯರು ಬಗ್ದಾದ್ ಮತ್ತು ಖ಼ರಾಸಾನಿನ ನಡುವೆ ಇರುವ ಜಲೂಲ ಪಟ್ಟಣದಲ್ಲಿ ಒಟ್ಟುಗೂಡಿ ಯುದ್ಧದ ತಯಾರಿಗಳನ್ನು ಶುರುಮಾಡಿದರು. ಹಝ್ರ‌ತ್ ಉಮರ್(ರ)ರ ಆದೇಶ ಪ್ರಕಾರ ಹಝ್ರ‌ತ್ ಸಅದ್(ರ) ಹಾಶಿಂ ಬಿನ್ ಉತ್‌ಬರಿಗೆ 12 ಸಾವಿರದ ಸೈನ್ಯವನ್ನು ಒಪ್ಪಿಸಿ ಜಲೂಲಕ್ಕೆ ರವಾನೆ ಮಾಡಿದರು. ಮುಸ್ಲಿಮರು ತಿಂಗಳುಗಟ್ಟಲೆ ಪಟ್ಟಣವನ್ನು ಮುತ್ತಿಗೆ ಹಾಕಿದರು. ಈ ವೇಳೆ ಸುಮಾರು 80 ಸಣ್ಣ ಯುದ್ಧಗಳು ನಡೆಯಿತು. ಜಲೂಲದ ಮೇಲೆ ವಿಜಯ ಸಾಧಿಸಿದಾಗ ಅಜಮ್ ನಿವಾಸಿಗಳನ್ನು ಹಿಂಬಾಲಿಸುವುದನ್ನು ತಡೆಯುತ್ತಾ ಹಝ್ರ‌ತ್ ಉಮರ್(ರ) ಹೀಗೆ ಹೇಳಿದರು: ನಾನು ಯುದ್ಧ ಸಂಪತ್ತಿಗಿಂತಲೂ ಮುಸ್ಲಿಮರ ಸುರಕ್ಷತೆಗೆ ಆದ್ಯತೆ ನೀಡುತ್ತೇನೆ.

ಯುದ್ಧ ಸಂಪತ್ತಿನ ಐದನೇ ಭಾಗವನ್ನು ಹಝ್ರ‌ತ್ ಉಮರ್(ರ)ರ ಸನ್ನಿಧಿಯಲ್ಲಿ ಸಮರ್ಪಿಸಿದಾಗ, ಯುದ್ಧ ಸಂಪತ್ತಿನಲ್ಲಿ ಇದ್ದ ಬೆಲೆಬಾಳುವ ರತ್ನಗಳನ್ನು ನೋಡಿ ಅವರು ಅತ್ತುಬಿಟ್ಟರು ಮತ್ತು ಹೀಗೆ ಹೇಳಿದರು: "ಯಾವ ಸಮುದಾಯಕ್ಕೆ ಇವು ಲಭಿಸುತ್ತದೋ ಅವರಲ್ಲಿ ಅಸೂಯೆ ಮತ್ತು ಹಗೆ ವರ್ಧಿಸುತ್ತದೆ." (ಹುಝೂರ್ ಹೇಳುತ್ತಾರೆ:) "ಇದು ಬಹಳ ಚಿಂತನೀಯ ಮತ್ತು ಪಶ್ಚಾತ್ತಾಪ ಮಾಡಬೇಕಾದಂತಹ ಸಂಗತಿಯಾಗಿದೆ. ಸಂಪತ್ತು ಬಂದ ನಂತರ ಮುಸ್ಲಿಮರಲ್ಲಿ ಅಸೂಯೆ ಮತ್ತು ಹಗೆ ವರ್ಧಿಸುತ್ತಾ ಹೋಯಿತು ಎಂದು ನಾವು ನೋಡುತ್ತಿದ್ದೇವೆ."

ಹಝ್ರ‌ತ್ ಸಅದ್(ರ) ಮದಾಇನಿನಲ್ಲಿ ತಂಗಿರುವಾಗಲೇ ಇರಾನಿನ ಸೈನ್ಯವು ಮೈದಾನದ ಪ್ರದೇಶಕ್ಕೆ ಬರುತ್ತಿರುವುದಾಗಿ ಅವರಿಗೆ ಮಾಹಿತಿ ಲಭಿಸಿತು. ಹಝ್ರ‌ತ್ ಉಮರರ ನಿರ್ದೇಶನ ಪ್ರಕಾರ ಝ಼ಿರಾರ್ ಬಿನ್ ಖ಼ತ್ತಾಬಿನ ನೇತೃತ್ವದಲ್ಲಿ ಒಂದು ಸೈನ್ಯ ಹೋರಾಟಕ್ಕಾಗಿ ಅಲ್ಲಿಗೆ ರವಾನೆಯಾಯಿತು. ಮಾಸ್‌ಬಝ಼ಾನಿನ ಮೈದಾನ ಪ್ರದೇಶದ ಹಂದಫ್ ಎಂಬ ಸ್ಥಳದಲ್ಲಿ ಯುದ್ಧ ನಡೆಯಿತು. ಇರಾನಿಯರು ಇಲ್ಲೂ ಸೋಲನ್ನು ಅನುಭವಿಸಿದರು.

ಹಿಜರೀ 14ರಲ್ಲಿ ಹಝ್ರ‌ತ್ ಉಮರ್(ರ) ಸೈನ್ಯದ ದೃಷ್ಟಿಕೋನದಿಂದ ಕೆಲವು ಪ್ರಯೋಜನವನ್ನು ಗಮನದಲ್ಲಿಟ್ಟು ಇರಾಕಿನಲ್ಲಿ ಸಣ್ಣ ಪ್ರಮಾಣದಲ್ಲಿ ಸೈನಿಕರಿಗೆ ಪ್ರವೇಶಿಸಲು ಇನ್ನೊಂದು ಮೈದಾನ ದ್ವಾರ ತೆರೆದರು. ದಂಡುನೆಲೆ ಪಟ್ಟಣವಾದ ಬಸ್ರಾದ ಶಂಕುಸ್ಥಾಪನೆ ಮಾಡಿದರು. ಈ ಪ್ರದೇಶದಲ್ಲಿ ಸೈನ್ಯವನ್ನು ಇರಿಸಲು ಮುಖ್ಯವಾದ ಉದ್ದೇಶವು ಇರಾನಿನ ಸೈನ್ಯಕ್ಕೆ ಸಹಾಯಕ ಸೈನ್ಯ ತಲುಪದಿರಲಿಕ್ಕಾಗಿತ್ತು. ಮುಸ್ಲಿಮರು ಖ಼ೂಝಿ಼ಸ್ತಾನದ ಪ್ರಸಿದ್ಧ ಪಟ್ಟಣವಾದ ಅಹ್‌ವಾಝ಼ನ್ನು ವಶಪಡಿಸಿದಾಗ ಅಲ್ಲಿಯ ಸರದಾರ ಬೇರ್‌ವಾಝ಼್ ಸಂಧಾನ ಮಾಡಿದನು. ಈ ಯುದ್ಧದಲ್ಲಿ ಮುಸ್ಲಿಮರು ಅನೇಕ ಜನರನ್ನು ಬಂಧಿಸಿ ಗುಲಾಮರನ್ನಾಗಿ ಮಾಡಿದ್ದರು. ಆದರೆ ಹಝ್ರ‌ತ್ ಉಮರ್(ರ)ರ ಆದೇಶ ಪ್ರಕಾರ ಎಲ್ಲರನ್ನು ಬಿಡುಗಡೆಗೊಳಿಸಲಾಯಿತು. ಆ ಪ್ರದೇಶದಲ್ಲಿ ಇರಾನಿಯರು ಎರಡು ರಸ್ತೆಗಳಿಂದ ಮುಸ್ಲಿಮ್ ಸೈನ್ಯದ ಮೇಲೆ ಪದೇ ಪದೇ ಆಕ್ರಮಣ ನಡೆಸುತ್ತಿದ್ದರು. ಮುಸ್ಲಿಮರು ಆ ಎರಡೂ ರಸ್ತೆಗಳನ್ನು ವಶಪಡಿಸಿದರು. ಹೆಚ್ಚಿನ ಜಾಗದಲ್ಲಿ ನಮಗೆ ಕಾಣಲು ಸಿಗುವುದೇನೆಂದರೆ, ಎಲ್ಲೆಲ್ಲ ಮುಸ್ಲಿಮರಿಗೆ ತೊಂದರೆ ಕೊಡಲಾಗುತ್ತಿತ್ತೋ, ಆಕ್ರಮಣ ನಡೆಸಲಾಗುತ್ತಿತ್ತೋ ಅಲ್ಲೆಲ್ಲ ಮುಸ್ಲಿಮರು ಆಕ್ರಮಣ ನಡೆಸಿದರು ಮತ್ತು ಆ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದರು.

ಜಲೂಲದಲ್ಲಿ ಮುಸ್ಲಿಮರ ವಿಜಯದ ನಂತರ ಇರಾನಿಯರು ಹರ್‌ಮಝ಼ಾನಿನ ನೇತೃತ್ವದಲ್ಲಿ ರಾಮಹರ್‌ಮಿಝ್‌ನಲ್ಲಿ ಒಟ್ಟುಗೂಡಿದರು. ಹಝ್ರ‌ತ್ ಉಮರರ ನಿರ್ದೇಶನ ಪ್ರಕಾರ ಹಝ್ರ‌ತ್ ಸಅದ್(ರ) ನುಅ್‌ಮಾನ್ ಬಿನ್ ಮಖ್‌ರನ್‌ರನ್ನು ಕೂಫ ಮತ್ತು ಅಬೂ ಮೂಸಾ ಅಶ್‌ಅರಿಯನ್ನು ಬಸ್ರಾದಿಂದ ಸೈನ್ಯದ ನೇತಾರರನ್ನಾಗಿ ಮಾಡಿ ರವಾನೆ ಮಾಡಿದರು. ಎರಡೂ ಸೈನ್ಯಗಳು ಬಂದುಸೇರುವಾಗ ಅಬೂ ಸಬ್‌ರ ಬಿನ್ ರುಹಮ್ ಅವರ ಕಮಾಂಡರ್ ಆಗಬೇಕು ಎಂದು ನಿರ್ದೇಶನ ಕೊಟ್ಟರು. ನೂಮಾನ್ ಬಿನ್ ಮಖ್‌ರನ್‌ರ ಸೈನ್ಯದೊಂದಿಗೆ ಹರ್‌ಮಝ಼ಾನಿನ ಮುಖಾಮುಖಿಯಾಯಿತು. ಅವನು ಸೋತು ತಿಸ್‌ತರಿನ ಕಡೆಗೆ ಪರಾರಿಯಾದನು. ದೀರ್ಘವಾದ ಮುತ್ತಿಗೆಯ ನಂತರ ಪಟ್ಟಣವನ್ನು ಜಯಿಸಲಾದಾಗ ಮತ್ತು ಹರ್‌ಮಝ಼ಾನನ್ನು ಬಂಧಿಸಲಾದಾಗ ತನ್ನ ವಿಷಯವನ್ನು ಹಝ್ರ‌ತ್ ಉಮರರಿಗೆ ವಹಿಸಿಕೊಡಬೇಕೆಂದು ಅವನು ತನ್ನ ಅಭಿಲಾಷೆಯನ್ನು ವ್ಯಕ್ತಪಡಿಸಿದನು. ಹಝ್ರ‌ತ್ ಅಬೂಮೂಸಾ ಅಶ್‌ಅರಿಯು ಹರ್‌ಮಝ಼ಾನನ್ನು ಮದೀನದಲ್ಲಿದ್ದ ಹಝ್ರ‌ತ್ ಉಮರರ ಸನ್ನಿಧಿಗೆ ಕಳುಹಿಸಿದರು. ಸಂಘವು ಮದೀನದಲ್ಲಿ ಪ್ರವೇಶಿಸಿದಾಗ ಹರ್‌ಮಝ಼ಾನ್‌ಗೆ ಅವನ ರೇಶ್ಮೆಯ ಬಟ್ಟೆಯನ್ನು ತೊಡಿಸಲಾಯಿತು. ಅದು ಚಿನ್ನದಿಂದ ಅಲಂಕಾರ ಮಾಡಲಾಗಿತ್ತು. ಅವನ ತಲೆಯಲ್ಲಿ ವಜ್ರವನ್ನು ಅಂಟಿಸಲಾದ ಕಿರೀಟವನ್ನು ಇಡಲಾಯಿತು. ಹಝ್ರ‌ತ್ ಉಮರ್(ರ) ಮತ್ತು ಮುಸ್ಲಿಮರು ಅವನ ಯಥಾರ್ಥ ಪ್ರತಾಪವನ್ನು ನೋಡಲಿಕ್ಕಾಗಿ ಹೀಗೆ ಮಾಡಲಾಗಿತ್ತು. ಅನಂತರ ಅವರು ಹಝ್ರ‌ತ್ ಉಮರರ ಕುರಿತು ಕೇಳಿದರು. ಅವರು ಮಸೀದಿಯಲ್ಲಿ ಇರುವರು ಎಂದು ಜನರು ಹೇಳಿದರು. ಅವರು ಮಸೀದಿ ತಲುಪಿದಾಗ ಹಝ್ರ‌ತ್ ಉಮರ್(ರ) ತನ್ನ ಮುಂಡಾಸಿನ ಮೇಲೆ ತಲೆಯನ್ನಿರಿಸಿ ನಿದ್ದೆ ಮಾಡುತ್ತಿದ್ದರು. ಉಮರ್ ಎಲ್ಲಿದ್ದಾರೆ ಎಂದು ಹರ್‌ಮಝ಼ಾನ್ ಕೇಳಿದರು. ಅವರು ಮಲಗಿರುವರು ಎಂದು ಜನರು ಹೇಳಿದರು. ಆ ಸಮಯದಲ್ಲಿ ಮಸೀದಿಯಲ್ಲಿ ಅವರಲ್ಲದೇ ಬೇರೆ ಯಾರೂ ಇರಲಿಲ್ಲ. ಅವರ ಕಾವಲುಗಾರರು ಮತ್ತು ದರ್ಬಾರಿಗಳು ಎಲ್ಲಿದ್ದಾರೆ ಎಂದು ಹರ್‌ಮಝ಼ಾನ್ ಕೇಳಿದನು. ಅವರಿಗೆ ಕಾವಲುಗಾರನ, ಬರಹಗಾರನ ಮತ್ತು ಮಂತ್ರಿಯ ಆವಶ್ಯಕತೆಯಿಲ್ಲ ಎಂದು ಹೇಳಲಾಯಿತು. ಹರ್‌ಮಝ಼ಾನ್ ತಟ್ಟನೆ ಹೀಗೆ ಹೇಳಿದನು: ಈ ವ್ಯಕ್ತಿ ಖಂಡಿತವಾಗಿಯೂ ಓರ್ವ ನಬಿಯಾಗಿರಬೇಕು. ಜನರು

ಹೇಳಿದರು: ಇವರು ನಬಿಯಂತು ಅಲ್ಲ, ಆದರೆ ಖಂಡಿತವಾಗಿಯೂ ಪ್ರವಾದಿಗಳ ಮಾರ್ಗದಲ್ಲಿರುವವರು ಆಗಿರುವರು. ಹಝ್ರತ್ ಉಮರರ ಸರಳತೆಯಿಂದ ಹರ್‌ಮಝಾನ್ ಬಹಳ ಪ್ರಭಾವಿತನಾದನು ಮತ್ತು ಒಂದು ಸ್ವಾರಸ್ಯಕರವಾದ ಮಾತುಕತೆಯ ನಂತರ ಇಸ್ಲಾಮನ್ನು ಸ್ವೀಕರಿಸಿದನು ಮತ್ತು ಮದೀನದಲ್ಲೇ ನೆಲೆಸಿದನು. ಹಝ್ರತ್ ಉಮರ್(ರ) ಅವರಿಗೆ 2 ಸಾವಿರದ ಪಿಂಚಣಿಯನ್ನು ನಿಶ್ಚಯಿಸಿದರು. ‘ಅಖಾಇದುಲ್ ಫರೀದ್’ನಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಉಮರ್(ರ) ಇರಾನಿನ ಮೇಲೆ ಸೈನಿಕ ಆಕ್ರಮಣ ನಡೆಸುವಾಗ ಹರ್‌ಮಝಾನಿನೊಡನೆ ಸಮಾಲೋಚನೆ ನಡೆಸುತ್ತಿದ್ದರು ಮತ್ತು ಅವನ ಸಲಹೆ ಪ್ರಕಾರ ನಡೆಯುತ್ತಿದ್ದರು.

ಹಝ್ರತ್ ಉಮರರ ಶಹಾದತಿನಲ್ಲಿ ಹರ್‌ಮಝಾನಿನ ಕೈವಾಡವಿತ್ತು ಎಂದು ಸಂಶಯಿಸಲಾಗುತ್ತದೆ. ಆದರೆ ಈ ಸಂಶಯವನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಸರಿಯೆಂದು ಭಾವಿಸುತ್ತಿರಲಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರರ ಕೊಲೆಗಾರನಾದ ಫೀರೋಝ್ ಕೊಲೆ ಮಾಡುವುದಕ್ಕೆ ಒಂದು ದಿನ ಮುಂಚೆ ಹರ್‌ಮಝಾನನ್ನು ಭೇಟಿಯಾಗಿದ್ದನು. ಫೀರೋಝಿನ ಕೈಯಲ್ಲಿ ಚೂರಿಯನ್ನು ಕಂಡು ಹರ್‌ಮಝಾನ್ ಅದರ ಕಾರಣವನ್ನು ಕೇಳಿದನು ಮತ್ತು ಆ ಚೂರಿಯನ್ನು ತನ್ನ ಕೈಯಲ್ಲಿ ಹಿಡಿದು ನೋಡಿದನು. ಅವರಿಬ್ಬರೂ ಮಾತನಾಡುತ್ತಿದ್ದಾಗ ಯಾರೋ ಅವರನ್ನು ನೋಡಿದರು. ಹಝ್ರತ್ ಉಮರ್(ರ) ಶಹೀದ್ ಆದಾಗ ಅವರು ಹೀಗೆ ಹೇಳಿಕೆ ಕೊಟ್ಟರು: ಫೀರೋಝಿಗೆ ಹರ್‌ಮಝಾನ್ ಚೂರಿಯನ್ನು ಕೊಡುವುದಾಗಿ ನಾನು ಸ್ವತಃ ನೋಡಿದ್ದೇನೆ. ಆಗ ಹಝ್ರತ್ ಉಮರರ ಕಿರಿಯ ಮಗನಾದ ಉಬೈದುಲ್ಲಾಹ್ ಯಾವುದೇ ತನಿಖೆ ನಡೆಸದೇ ಸ್ವತಃ ಹರ್‌ಮಝಾನನ್ನು ಕೊಲೆ ಮಾಡಿದನು. ಹಝ್ರತ್ ಉಸ್ಮಾನ್(ರ) ಖಲೀಫರಾದಾಗ ಅವರು ಹರ್‌ಮಝಾನಿನ ಮಗನನ್ನು ಕರೆದರು ಮತ್ತು ಉಬೈದುಲ್ಲಾಹ್‌ರನ್ನು ಆತನಿಗೆ ಒಪ್ಪಿಸಿಕೊಂಡು ಹೇಳಿದರು: ಹೇ ನನ್ನ ಪುತ್ರಾ, ಇವನು ನಿನ್ನ ತಂದೆಯ ಕೊಲೆಗಾರನಾಗಿರುವನು. ಆದ್ದರಿಂದ ನೀನು ಹೋಗು ಮತ್ತು ಅವನನ್ನು ಕೊಂದುಹಾಕು. ಹೇಗಿದ್ದರೂ ಹರ್‌ಮಝಾನಿನ ಮಗನು ಜನರ ಶಿಫಾರಿಸಿನ ಮೇಲೆ ಉಬೈದುಲ್ಲಾಹ್‌ರನ್ನು ಕೊಲ್ಲಲಿಲ್ಲ. ಕೊಲೆಗಾರನನ್ನು ಬಂಧಿಸುವುದು ಮತ್ತು ಅವನಿಗೆ ಶಿಕ್ಷೆ ನೀಡುವುದು ಸರ್ಕಾರದ ಕೆಲಸವಾಗಿದೆ ಎಂದು ಇದರಿಂದ ಸಾಬೀತಾಗುತ್ತದೆ.

(ಹಝ್ರತ್ ಉಮರ್(ರ)ರ ಪ್ರಸ್ತಾಪ ಮುಂದುವರೆಯುವುದು ಎಂದು ಹೇಳುತ್ತಾ ಹಝ್ರತ್ ಖಲೀಫತುಲ್ ಮಸೀಹರು ಇತ್ತೀಚೆಗೆ ನಿಧನರಾದ ಸನ್ಮಾನ್ಯ ಪ್ರೊಫೆಸರ್ ನಸೀಂ ಸಈದ್ ಸಾಹಿಬ, ಜರ್ಮನಿಯ ಸನ್ಮಾನ್ಯ ದಾವೂದ್ ಸುಲೈಮಾನ್ ಬಟ್ ಸಾಹಿಬ್, ಸನ್ಮಾನ್ಯ ಝಾಹಿದ ಪರ್‌ವೀನ್ ಸಾಹಿಬ, ಲಂಡನಿನ ಸನ್ಮಾನ್ಯ ರಾನಾ ಅಬ್ದುಲ್‌ವಹೀದ್ ಸಾಹಿಬ್, ಬಾಂಗ್ಲಾದೇಶದ ಮಾಜಿ ನೇಶನಲ್ ಅಮೀರ್ ಆದ ಸನ್ಮಾನ್ಯ ಅಲ್‌ಹಾಜ್ ಮೀರ್ ಮುಹಮ್ಮದ್ ಅಲಿ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಜನಾಝ ಗಾಇಬ್ ನಮಾಝ್ ಸಹ ನಿರ್ವಹಿಸುವುದಾಗಿ ಹೇಳಿದರು ಹಾಗೂ ಎಲ್ಲ ದಿವಂಗತರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ۔

***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 30-07-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha’at Team for Nazarath Nashr-O-Isha’ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon